ಮಾಡಿರುವಿರಿ. ದರಿದ್ರ ನಾರಾಯಣರಿಗೆ ಸಹಾನುಭೂತಿಯನ್ನು ತೋರಿ ನಿಮ್ಮ ಕೈಲಾದಷ್ಟು ಸಹಾಯ ಮಾಡಿರುವಿರಿ ಮತ್ತು ದಕ್ಷಿಣ ಭಾರತದಲ್ಲಿ ಅತ್ಯುತ್ತಮವೂ ಮನೋಹರವೂ ಆದ ಹಿಂದಿ ಭಾಷೆಯನ್ನು ಬರೆಯಬಲ್ಲವರಿರುವಿರೆಂಬುದನ್ನು ಮನೋಹರವಾಗಿಯೂ, ಸುಂದರವಾಗಿಯೂ ಉಚ್ಚರಿಸುವವರೆಂಬುದನ್ನೂ ತೋರಿಸಿ ನನಗೆ ಆನಂದವನ್ನುಂಟು ಮಾಡಿರುವಿರಿ. ನಟರಲ್ಲಿ ವಿಶೇಷ ಜನರು ಖಾದಿಯನ್ನು ಧರಿಸುವುದರಿಂದ ನನಗೆ ಮಹದಾನಂದವಾಗಿದೆ. ನಾಟಕವು ಆಧುನಿಕ ರೂಪ ತಳೆದಿದ್ದರೂ ಅದರಲ್ಲಿ ಪ್ರತಿಯೊಬ್ಬ ನಟನೂ ತನ್ನ ಕರ್ತವ್ಯವನ್ನು ಈ ದಿನ ಚೆನ್ನಾಗಿ ನೆರವೇರಿಸಿರುವನು. ಈ ದಿನ ನಾಟಕದಲ್ಲಿ ಬೋಧಿಸಲ್ಪಟ್ಟ ಧರ್ಮವೇ ನಟರಿಗೂ ಪೋಷಕರಿಗೂ ಧರ್ಮವಾಗಿ ಪರಿಣಮಿಸಲಿ’.

‘ನಾನು ಸಜೀವದಿಂದ ಕರ್ನಾಟಕವನ್ನು ಬಿಟ್ಟು ಹೋದರೆ...’ ಎಂದು ಗಾಂಧೀಜಿ ಹೇಳಿರುವುದರಲ್ಲಿ ಒಂದು ವಿಶೇಷಾರ್ಥವಿದೆ.

ಕಾರಾಗೃಹದ ಬವಣೆ ಅನುಭವಿಸಿ ಬಂದಿದ್ದ ಗಾಂಧೀಜಿ, 1926ರಲ್ಲಿ ತುಂಬ ಕಾಹಿಲೆ ಬಿದ್ದರು. ಆಗ ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಸಾಹೇಬರು ಚಿಕಿತ್ಸೆ ವಿಶ್ರಾಂತಿಗಾಗಿ ಬೆಂಗಳೂರಿಗೆ ಬರಲು ಗಾಂಧೀಜಿಯವರನ್ನು ಆಹ್ವಾನಿಸಿದರು. ಗಾಂಧೀಜಿ ಆಹ್ವಾನ ಅಂಗೀಕರಿಸಿ ಬಂದರು. ಪ್ರಶಾಂತ ನಂದಿ ಬೆಟ್ಟದ ಮೇಲೆ ಗಾಂಧೀಜಿ, ಅವರ ಪರಿವಾರದ ಬಿಡಾರ ವ್ಯವಸ್ಥೆಯಾಯಿತು, ಮೈಸೂರಿನ ಪ್ರತಿಭಾಶಾಲಿ ಶಸ್ತ್ರವಿದ್ಯಾಪ್ರವೀಣ ಡಾ. ಎನ್. ಸುಬ್ಬರಾಯರು ಗಾಂಧೀಜಿಯವರ ಡಾಕ್ಟರಾಗಿ ನೇಮಿಸಲ್ಪಟ್ಟರು.

ಪಂಡಿತ ತಾರಾನಾಥರು ಗಾಂಧೀಜಿ ಜೊತೆಗೆ ಇದ್ದುಕೊಂಡು, ತಮ್ಮ ತೇಜಃಪುಂಜ ಸಂಭಾಷಣೆ, ಅತ್ಯಾನಂದಕರ ಗಾಯನದಿಂದ ಗಾಂಧೀಜಿಯವರ ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿದ್ದರು.

ಭಾರತದ ಪುಣ್ಯ- ಈ ಇಬ್ಬರು ಪ್ರತಿಭಾಶಾಲಿ ವೈದ್ಯರ ಚಿಕಿತ್ಸೆಯ ಫಲವಾಗಿ ಗಾಂಧೀಜಿ ಆರೋಗ್ಯ ಸುಧಾರಿಸಿತು.

ಗಾಂಧೀಜಿ ಊರಿಗೆ ಹೊರಟು ನಿಂತರು. ಅವರ ಒಂದು ಬದಿಗೆ ತಾರಾನಾಥರವರು, ಇನ್ನೊಂದು ಬದಿಗೆ ಡಾ. ಸುಬ್ಬರಾಯರು. ಇಬ್ಬರ ಕೈ ಹಿಡಿದು ಗಾಂಧೀಜಿ.

‘ಡಾಕ್ಟರೇ, ನೀವು ನನ್ನ ದೇಹಕ್ಕೆ ಚಿಕಿತ್ಸೆ ಮಾಡಿ ಅದನ್ನು ಸುಧಾರಿಸಿದಿರಿ – ಪಂಡಿತ ಜೀ, ನೀವು ನನ್ನ ಆತ್ಮಕ್ಕೆ ಚಿಕಿತ್ಸೆ ಮಾಡಿ ಅದನ್ನು ಸುಧಾರಿಸಿದಿರಿ, ನಾನು ನಿಮ್ಮಿಬ್ಬರಿಗೂ ಚಿರಋಣಿ’ ಎಂದರು.

ತಾರಾನಾಥರವರು ಅಮೆಚೂರ್ ಮಂಡಳಿಯ ಚಟುವಟಿಕೆಗಳಲ್ಲಿ ಸದಾ ಆಸಕ್ತಿ ವಹಿಸುತ್ತಿದ್ದುದಲ್ಲದೆ, ಮಂಡಳಿಯಲ್ಲಿ ಉತ್ತರಾದಿ ಸಂಗೀತದ ಒಂದು ಶಾಲೆಯನ್ನು ತೆಗೆದು ನಡೆಸುತ್ತಿದ್ದರು. ಈ ಶಾಲೆಯಲ್ಲಿ ಹಾಗೂ ಕೆಲವು ದಿನ ಉತ್ತರಾದಿ ಸಂಗೀತ ಕಲಿತೆ.

ಸುಮಾರು 37–38 ವರ್ಷಕಾಲ ರಂಗಭೂಮಿಗೆ ಅಪೂರ್ವ ಸೇವೆ ಸಲ್ಲಿಸಿದ ಅಮೆಚೂರ್ ಮಂಡಳಿ 1946ರಲ್ಲಿ ಬಳ್ಳಾರಿಯ ರಾಘವರ ನಿಧನಾನಂತರ ನಾಮಾವಶೇಷವಾಯಿತು. ಅದನ್ನು ಪುನರುಜ್ಜೀವನಗೊಳಿಸುವ ಹಲವು ಪ್ರಯತ್ನಗಳು ನಡೆದುವು. ಈಗಲೂ ನಡೆಯುತ್ತಿವೆ.

ಬೆಳಗಾಂವಿಯ ದೇಶಪಾಂಡೆ ಗಂಗಾಧರರಾಯರ ಪ್ರಯತ್ನದಿಂದ ‘ನ್ಯಾಷನಲ್ ಕಾಂಗ್ರೆಸ್’ನ ವಾರ್ಷಿಕಾಧಿವೇಶನ ಬೆಳಗಾಂವಿಯಲ್ಲಿ ಸೇರಲು ನಿರ್ಣಯವಾಯಿತು. ಇದಕ್ಕೆ ಪೂರ್ವದಲ್ಲಿ ಕಾಂಗ್ರೆಸ್ ಅಧಿವೇಶನ ಎಲ್ಲಿ ಸೇರಬೇಕೆಂಬುದರ ಬಗ್ಗೆ ವಿಪುಲ ಚರ್ಚೆಯಾಯಿತು. ಗಂಗಾಧರರಾಯರಿಗೆ ಮಹಾರಾಷ್ಟ್ರದ ನಿಕಟ ಸಂಬಂಧವಿದ್ದು



ಎಐ ಚಿತ್ರ